# ಸಾವಧಾನವು ಅವಸರದ ಬೆನ್ನೇರಿದಾಗ

■ ಸುಧಾಕರ ದೇವಾಡಿಗ ಬಿ.
ಕಲೆ: ಸಂತೋಷ್ ಸಸಿಹಿತ್ಲು

ಯುಗಾದಿ ವಿಶೇಷಾಂಕ 2026

ತೀರ್ಪುಗಾರರ ಮೆಚ್ಚುಗೆ ಪಡೆದ ಪ್ರಬಂಧ

ಗೋಡೆಯ ಮೂಲೆಯ ತುದಿಯಲ್ಲಿ ಬಲೆಯನ್ನು ನೇಯುವ ಜೇಡರ ಕೌಶಲ್ಯವನ್ನು ಕಣ್ಣುನೆಟ್ಟು ಗಂಟೆಗಟ್ಟಲೆ ನೋಡುತ್ತ ಕುಳಿತ ಚಿತ್ರಣವಿನ್ನು ಮನದಲ್ಲಿ ಹಸಿರಾಗಿದೆ. ಹೀಗೆ ನೋಡಿ ದಶಕಗಳು ಕಳೆದರು ಅದರ ನೆನಪಿನ್ನು ಕುಂದಿಲ್ಲ. ಇದನ್ನೆಲ್ಲ ನೋಡಲು ಪುರುಸೊತ್ತು ಇತ್ತು ಎಂದೇನಲ್ಲ. ಸಮಯವನ್ನು ಹೊಂದಿಸಿಕೊಂಡು ನೋಡುವ ವ್ಯವಧಾನವಿತ್ತು. ನಮ್ಮ ಬದುಕಿನ ಕ್ರಮ ಇದನ್ನು ಸಾಧ್ಯವಾಗಿಸಿತ್ತು. ಸುರಿಯುವ ಮಳೆಯನ್ನೊ, ಹರಿಯುವ ನೀರನ್ನೊ, ಗಾಳಿ ಎಬ್ಬಿಸಿದ ದೂಳನ್ನೊ ಏಕಚಿತ್ತದಿಂದ ನೋಡುವಷ್ಟು ಸಮಯ ಇರುವ ಕಾಲದಲ್ಲಿ ಬಾಲ್ಯವನ್ನು ಕಳೆದವರು ನಾವು. ಈಗಿನ ವೇಗ ಪ್ರಧಾನ ವ್ಯವಸ್ಥೆಯಲ್ಲಿ ಇವೆಲ್ಲವು ಸ್ಮೃತಿಚಿತ್ರಗಳಾಗಿ ನಮ್ಮಲ್ಲಿ ನೆಲೆನಿಂತಿವೆ. ಇದೆಲ್ಲವು ಇಲ್ಲದಿರುವ ಸ್ಥಿತಿಗೆ ಯಾರು ಹೊಣೆಗಾರರು? ಉತ್ತರಿಸುವುದು ಸುಲಭವಲ್ಲ. ಮನುಷ್ಯರನ್ನೊ ಅಥವಾ ಅವರನ್ನು ಸ್ಪರ್ಧೆಗೆ ನಿಲ್ಲಿಸಿದ ಕಾಲವನ್ನೊ ಹೊಣೆಯಾಗಿಸುವುದು ಸುಲಭ. ಇದೆಲ್ಲವು ಪಲಾಯನವಾದಿ ಉತ್ತರವಾದಿತೇ ಹೊರತು, ಈ ಕಗ್ಗಂಟನ್ನು ಬಿಡಿಸುವಷ್ಟು ಸಶಕ್ತವಾಗಿಲ್ಲ ಎಂದು ಅರಿತು ಮುನ್ನಡೆಯೋಣ.

ವೇಗವೇ ಕಾಲದ ಮನೋಧರ್ಮವಾಗಿದೆ. ಮಾನವನ ಜೀವನ ಸೇರಿದಂತೆ ಎಲ್ಲವೂ ಅವಸರದ ಬೆನ್ನೇರಿ ಸವಾರಿ ಹೊರಟ ಕಾಲವಿದು. ಇದು ತೀರಾ ಉತ್ಪ್ರೇಕ್ಷೆಯ ಮಾತಲ್ಲ. ಇಂತಹ ಕಾಲದಲ್ಲಿ ಸ್ವೈರಣೆ, ತಾಳ್ಮೆಗೆಲ್ಲಿ ಸ್ಥಾನವಿದೆ? ನಮ್ಮ ಬಾಲ್ಯಕಾಲದಲ್ಲಿ ಪದೇ ಪದೇ ಕಿವಿ ಮೇಲೆ ಬೀಳುತ್ತಿದ್ದ ಮಾತೊಂದಿದೆ. ಹಾಗೆಯೇ ಲಾರಿ, ಟ್ರ್ಯಾಕ್ಟರ್ ಸೇರಿದಂತೆ ಇತರ ವಾಹನಗಳ ಮೇಲೆ ಬರೆಯುತ್ತಿದ್ದ ಸಾಲುಗಳು ನಿಮ್ಮ ಸ್ಮೃತಿಯಲ್ಲಿ ಹಸಿರಾಗಿರಬಹುದು. ಅವುಗಳೆಂದರೆ, 'ಅವಸರವೇ ಅಪಘಾತಕ್ಕೆ ಕಾರಣ' ಮತ್ತೊಂದು 'ತಾಳಿದವನು ಬಾಳಿಯಾನು' ಎಂಬ ಗಾದೆ ಮಾತು. ಇಂದು ಇವೆರಡು ನುಡಿಗಳು ಕಾಲದ ಅಪಹಾಸ್ಯಕ್ಕೆ ಗುರಿಯಾಗಿ ಇದ್ದು ಇಲ್ಲದಂತೆ ಅರೆಜೀವ ಹಿಡಿದು ಬಾಳುತ್ತಿವೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಒಡುಹುಳವೊಂದು ಸೆಗಣಿಯನ್ನು ಉಂಡೆ ಕಟ್ಟಿಕೊಂಡು ಹಿಂಗಾಲಿನಲ್ಲಿ ತಳ್ಳುತ್ತಾ ಹೋಗುವ ಚಿತ್ರಣವಿದೆ. ಇಂತಹ ಅನೇಕ ಚಿತ್ರಣಗಳನ್ನು ಕುವೆಂಪು ಅವರ ಕಥನ ಪ್ರತಿಭೆ ಸಾಕ್ಷಾತ್ಕರಿಸಿಕೊಂಡಿದೆ. ಪರಿಸರದ ವಿರಾಟ್ ಸ್ವರೂಪದ ಲಯದಲ್ಲಿ ಓಡುಹುಳುವಿಗೂ ತನ್ನದೇ ಆದ ಬದುಕಿನ ಚಲನೆಯಿದೆ. ಇದು ಸಹ ಮಹತ್ ಸ್ವರೂಪದ ಸೃಷ್ಟಿಯ ಪ್ರಮುಖ ಘಟನೆಯಾಗಿದೆ. ಕುವೆಂಪು ಅವರಂತಹ ಮಹಾಕವಿಯ ದಿಟ್ಟಿಗೆ ಇದೊಂದು ಕ್ಷುಲಕ ಕ್ಷುದ್ರ ಘಟನೆಯಾಗಿ ಗೋಚರಿಸುವುದಿಲ್ಲ. ಇದರ ಸಾಹಿತ್ಯಕ, ಸಾಂಸ್ಕೃತಿಕ ಮಹತ್ವವೇನೇ ಇರಲಿ ಅದರ ಚರ್ಚೆ ಇಲ್ಲಿ ಅನಗತ್ಯ. ಅವಸರವು ಸಾವಧಾನದ ಬೆನ್ನೇರಿದಾಗ ಮಾತ್ರ ಬದುಕಿನ ಸಣ್ಣ ಚಲನೆಗಳು ನಮ್ಮ ದೃಷ್ಟಿಪಥಕ್ಕೆ ಗೋಚರಿಸುವುದು ಎಂಬುದನ್ನು ಗಮನಕ್ಕೆ ತರಲು ನಿಮ್ಮೆದುರು ಇದನ್ನೆಲ್ಲ ನಿವೇದಿಸಬೇಕಾಯಿತು. ಕುವೆಂಪು ಜೀವಿಸಿದ್ದ ಕಾಲದಲ್ಲಿನ್ನು ತಾಳ್ಮೆ, ಸ್ವೈರಣೆ ಅಗತ್ಯ ಮೌಲ್ಯಗಳಾಗಿ ಚಲಾವಣೆಯಲ್ಲಿದ್ದವು. ಅವು ಬದುಕಿನಲ್ಲಿ ಸಹಜ ಗುಣಗಳಾಗಿಯೂ ಮೈದಾಳಿದ್ದವು. ಆಧುನಿಕ ತಲೆಮಾರಿನ ಅವಸರದ ಮತಿಯು ಇಂತಹ ಬದುಕಿನ ಲಯಗಳನ್ನು ಅರಿಯಲಾರದು. ಧಾವಂತದ ಬಾಳಿಗೆ ಇವೆಲ್ಲವನ್ನು ಕಾಣುವ ವ್ಯವಧಾನವೆಲ್ಲಿದೆ? ಇಂತಹ ಚಿತ್ರಗಳನ್ನು ಸಾಹಿತ್ಯದಲ್ಲಿ ಸೃಜಿಸುವ ಮನೋಧರ್ಮಕ್ಕೂ ಬೆನ್ನುಹಾಕಿ ನಡೆದರೆ ಅಚ್ಚರಿಯೇನಿಲ್ಲ.

